ಬೀಗನಂತು ಅದಾಗಲೇ ಮಾವನ ಯಜಮಾನಿಕೆಯ ಪಾತ್ರದಲ್ಲಿ ನಿರಾಳ ಓಡಾಡುತ್ತ, 'ಋಣಾನುಬಂಧ ನೋಡಿ. ಕೆಲ್ಸ ಇದ್ರೆ ಹೇಳಿ' ಎಂದು ಯಮುನಕ್ಕನಿಗೆ ಧಾರಾಳ ನೆರವನ್ನು ಘೋಷಿಸಿದ. ಕಣ್ಮುಚ್ಚಿ ಮಲಗಿದ್ದ ಜನಾರ್ದನನ ಮಂಚದ ಸನಿಹ ಕೈಕಟ್ಟಿ ಅನಿಸಿದ್ದು ಮಾತಾಗದೆ ಸಂತಾಪ ಸೂಚಿಸುವವನಂತೆ ಕ್ಷಣ ಹೊತ್ತು ನಿಂತು ನಿರ್ಗಮಿಸಿದ. ಹಬ್ಬದ ಸಡಗರವಿದ್ದರೂ ಯಮುನಕ್ಕನೊಳಗೆ ಮಮತೆ, ಮೋಹ ಉಕ್ಕಲಿಲ್ಲ. ಮಧ್ಯಾಹ್ನದ ಹೊತ್ತಿಗೆ ಮಾಸ್ತರು ಪಾಂಡೇಶ್ವರರ ಮಗ ಪ್ರಸನ್ನನೊಂದಿಗೆ ಬಂದರು. ಪ್ರಸನ್ನ ಒಂದೆರಡು ಸಲ ದಾರಿಯಲ್ಲಿ ಮಾಸ್ತರರನ್ನು ಸಂಧಿಸಿ, 'ಜನಾರ್ದನ ಅವಧಾನಿ ನನ್ನ ಅಪ್ಪನ ಮಾನಭಂಗವಾಗುವ ಹಾಗೆ ಪುಸ್ತಕದಲ್ಲಿ ಸುಳ್ಳು ಬರೆದಿದ್ದಾರೆ. ಬರೀ ಜಗಳದ ಮಾತಾಗಿದ್ದರೆ ಗಾಳಿಯಲ್ಲಿ ಹಾರಿ ಹೋಗುತ್ತಿತ್ತು. ಅದೊಂದು ದಾಖಲೆ. ಬರವಣಿಗೆಯಲ್ಲಿದ್ದದ್ದನ್ನು ಸತ್ಯ ಎಂದು ಜನ ನಂಬ್ತಾರೆ. ಆ ಪುಸ್ತಕವನ್ನು ಹಿಂತೆಗೆದು ಕೊಳ್ಳುವವರೆಗೆ ನಾನು ಬಿಡೋದಿಲ್ಲ. ಮಾನನಷ್ಟ ಮೊಕದ್ದಮೆ ಹಾಕ್ತೇನೆ' ಎಂದು ಬಿಸಿ ರಕ್ತದ ಅವನು ಏರು ದನಿಯಲ್ಲಿ ಅಬ್ಬರಿಸಿದ್ದ. ತನ್ನ ಮಿತ್ರನೆಂಬ ಅಭಿಮಾನದಿಂದ ಮಾಸ್ತರರು ಅವನಿಗೂ ಕಾದಂಬರಿಯನ್ನು ಓದಲು ಕೊಟ್ಟಿದ್ದರು. ಅದು ಇಷ್ಟು ವಿಕೋಪಕ್ಕೆ ಹೋಗಬಹುದೆಂದು ಅವರಿಗೆ ಹೊಳೆದಿರಲಿಲ್ಲ. ಈಗವರು 'ನಿಮ್ಮ ನೆರೆಮನೆಯವರು. ಅದೇನು ತಳ್ಳಿ ಅರ್ಜಿ ಅಲ್ಲ, ಕಾದಂಬರಿ' ಎಂದು ಸಂದಿಗ್ಧದಲ್ಲಿ ಸಿಲುಕಿದ್ದ ಮಾಸ್ತರರು ಸಂತೈಸಲು ಯತ್ನಿಸಿ ಸೋತಿದ್ದರು. ಯುದ್ಧ ಸಂದೇಶವನ್ನು ಸಾರಿ ಹೋಗಲು ಪ್ರಸನ್ನ ಮಾಸ್ತರರನ್ನು ಜುಲುಮೆಯಿಂದ ಜತೆಗೆ ಕರೆದು ಕೊಂಡು ಬಂದಿದ್ದ.



ಪ್ರಸನ್ನ ಜಗಲಿಯಲ್ಲಿ ಗಂಟುಮೋರೆ ಹಾಕಿ ಕುಳಿತಿದ್ದ. ಮಾಸ್ತರರ ಕಳವಳ, ಸಂಕಟ, ಚಡಪಡಿಕೆ ರೆಪ್ಪೆಯ ಉದ್ವೇಗದ ಬಡಿದಾಟದಲ್ಲಿ, ಬೆರಳುಗಳ ನೆಟಿಕೆ ಮುರಿಯುವುದರಲ್ಲಿ ಕಾಣುತ್ತಿತ್ತು. ಪ್ರಸನ್ನನ ಬೆದರಿಕೆಯ ಮಾತಿನ ಗತ್ತಿಗೆ, ತಪ್ಪೊಪ್ಪಿಸಿ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಸಂಧಾನಕ್ಕೆ ಒತ್ತಾಯಿಸುತ್ತಿರುವ ಹಟದ ವಾದಕ್ಕೆ ಶ್ರೀಪತಿ ಮಣಿಯಲು ಸಿದ್ಧನಿರಲಿಲ್ಲ. 'ಹಳೆಯವರ ವಿಷಯ. ನಮ್ಮ ನಿಯಂತ್ರಣ ಮೀರಿದ್ದಕ್ಕೆ ನಾವು ಜವಾಬ್ದಾರರಾಗಬೇಕಿಲ್ಲ. ಅಷ್ಟಕ್ಕೂ ಕಾದಂಬರಿಯಲ್ಲಿ ಬರೆದದ್ದು ಸತ್ಯವೊ ಸುಳ್ಳೊ ಎಂದು ಓದುಗರು ತೀರ್ಮಾನಿಸುತ್ತಾರೆ. ಮನೆಗೆ ಮೊದಲ ಸಲ ಬಂದಿದ್ದೀರಿ. ಚಹಾ ಆಗಭೌದಲ್ಲ.' ಶ್ರೀಪತಿಯ ಸ್ನೇಹದ ಉಪಸಂಹಾರವನ್ನು ನಿರಾಕರಿಸುತ್ತ ಪ್ರಸನ್ನ, 'ಆರೋಪ ಮಾಡಿದವರಿಗೆ ನಿಮ್ಮ ಹಾಗೆ ಮಾತಾಡೋದು ಸುಲಭ. ಆರೋಪಿಯ ಸ್ಥಾನದಲ್ಲಿ ನಿಂತವರಿಗೆ ಅದರ ನೋವು ಗೊತ್ತಾಗೋದು. ಮಾಡಿದ್ದು ಮಹಾ ಪಾಪ ಎಂದು ಅನಿಸಿದ್ದಕ್ಕೇ ನಿಮ್ಮ ಅಪ್ಪಯ್ಯನಿಗೆ ಹುಚ್ಚು ಹಿಡಿದದ್ದು. ಹಾಗಾದ್ರೆ ನಾವು ಕೋರ್ಟಿನಲ್ಲಿ ಭೇಟಿಯಾಗ್ಬೇಕು ಅಂತ ನಿಮ್ಮ ಅಭಿಪ್ರಾಯ' ಎಂದು ಹೊರಡಲು ಎದ್ದು ನಿಂತ. ಹುಚ್ಚು ಶಬ್ದ ಕೇಳಿದ ಶ್ರೀಪತಿಯ ಕಣ್ಣೊಳಗೆ ಕ್ರೋಧ ನುಗ್ಗಿ ಬಂದರೂ ಸಂಯಮದಿಂದ ತಡೆದುಕೊಂಡ. 'ಆಡಿದ್ದು ಸರಿಯಲ್ಲ' ಎಂದು ಮಾಸ್ತರರು ಅಸಹಾಯಕತೆಯಿಂದ ಗೊಣಗಿ ನರಳಿದರು. ಗಜಾನನ ಮತ್ತು ಯಮುನಕ್ಕ ಆವೇಶ ತಾಳುವ ಮುಂಚೆಯೇ ಕಂಭ ಒಡೆದು ಬಂದಂತೆ ಜನಾರ್ದನ ಕೋಣೆಯಿಂದ ಹೊರಬಂದು, 'ನಾನ್ಯಾರು ಗೊತ್ತಾಯ್ತೊ ನಿನಗೆ? ಜನಾರ್ದನ ಅವಧಾನಿಯೂ ಅಲ್ಲ, 'ಜಯಶ್ರೀ'ಯೂ ಅಲ್ಲ. ಪರ್ವತೇಶ್ವರ...ಪರ್ವತೇಶ್ವರ... ಕೇಸ್ ಜಡಿ ನೋಡ್ವಾ' ಎಂದು ಅರೆಗಳಿಗೆ ಮೌನ ಮೆಟ್ಟಿ ನಿಂತು ದಾಪುಗಾಲು ಹಾಕಿ ಕೋಣೆ ಹೊಕ್ಕು ಕದ ಮುಚ್ಚಿದ. ಅಪ್ಪನ ಹಸ್ತಕ್ಕೆ ಕತ್ತದ ಹುರಿಯಲ್ಲಿ ಸುತ್ತಿಕೊಂಡ ತಾಳಮದ್ದಲೆಯ ಭಾಗವತರ ಒಂಟಿ ತಾಳ ನೋಡಿದ ಶ್ರೀಪತಿ ಇನ್ನೊಂದು ತಾಳ ಎಲ್ಲಿರಬಹುದೆಂದು ಯೋಚಿಸತೊಡಗಿದ. ●